ಓ.ಎಸ್. ನಂಃ 80/2019 ಡಿ.ಡಬ್ಲ್ಯೂ (3) /ಸಾಕ್ಷಿ

**ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಮ್ ಸಿ ವಕೀಲರಿಂದಃ**

ನಮ್ಮೂರು ಓಜನಳ್ಳಿ ಎಂದರೆ ಸರಿ. ಅಲ್ಲೆ ಇರುತ್ತೇನೆ ಎಂದರೆ ಸರಿ. ಕಲಕೇರಿಯಿಂದ ಓಜನಳ್ಳಿ 8 ರಿಂದ 10 ಕಿ.ಮೀ ದೂರ ಎಂದರೆ ಸರಿ. ದೇವಪ್ಪ ನನಗೆ ಮಾವನಾಗಬೇಕು, ಅವರ ಮಗಳು ಭಾರತಿಯವರನ್ನು ನಾನೇ ಮದುವೆ 2004 ರಲ್ಲಿ ಆಗಿದ್ದೇನೆ.

2. 2011 ರಲ್ಲಿ ನನಗೂ ಮತ್ತು ಭಾರತಿಗೂ ತಂಟೆಯಾಗಿತ್ತು ಎಂದರೆ ಸರಿಯಲ್ಲ. 2011 ರಿಂದ 2013 ರ ಮದ್ಯೆ ಕಲಕೇರಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೂ ಮತ್ತು ಭಾರತಿಗೂ ಯಾವುದೇ ಕಾಲಕ್ಕೂ ತಂಟೆಯಾಗಿಲ್ಲ ಎನ್ನುತ್ತಾರೆ. ದೇವಪ್ಪ ನಾಗಪ್ಪನಿಗೆ ಖರೀದಿ ವಚನ ಪತ್ರ ಬರೆದುಕೊಟ್ಟಾಗ ನಾನು ಸಬ್ ರಿಜಿಸ್ಟರ್ ಕಚೇರಿಗೆ ಹೋಗಿಲ್ಲ. ನಾನು ಮತ್ತು ಗವಿಸಿದ್ದಪ್ಪ ಜಂತ್ಲಿ ಕೂಡಿ ದೇವಪ್ಪ ಮತ್ತು ನಾಗಪ್ಪನಿಗೆ ಈ ವ್ಯವಹಾರ ಮುಗಿಸಿಕೊಟ್ಟಿದ್ದೇವು ಎಂದರೆ ಸರಿ. ನಾವು ವ್ಯವಹಾರ ಮುಗಿಸಿಕೊಟ್ಟ ಪ್ರಕಾರ ದೇವಪ್ಪ ಮತ್ತು ನಾಗಪ್ಪ ಸಬ್ ರಿಜಿಸ್ಟರ್ ಕಚೇರಿಗೆ ಹೋಗಿ ನೊಂದಣಿ ಮಾಡಿಕೊಂಡರು ಎಂದರೆ ಸರಿ.

3. ನೊಂದಣಿ ಮಾಡಿದ 3 ರಿಂದ 4 ತಿಂಗಳಿಗೆ ಆ ವಿಷಯ ಗೊತ್ತಾಯಿತು, ನಂತರ ಪ್ರತಿವಾದಿ ನಂ. 1 ಮತ್ತು 3 ಶಿವಮ್ಮ ಮತ್ತು ಹಳ್ಳಮ್ಮ ಪ್ರತಿವಾದಿ ನಂ. 7 ಶಿವಪ್ಪನಿಗೆ ಈ ಜಮೀನು ಮಾರಾಟ ಮಾಡುವಾಗ ನಾನು ಆ ಖರೀದಿ ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎನ್ನುವುದು ಸರಿ. ನಾಗಪ್ಪನಿಗೆ ಬರೆದುಕೊಟ್ಟ ಖರೀದಿ ವಚನ ಪತ್ರ ಇನ್ನೂ ರದ್ದುಪಡಿಸಿಲ್ಲ ಎಂಬ ವಿಷಯ ಶಿವಪ್ಪ ಚೆರಾರಿಗೆ ಖರೀದಿ ಪತ್ರ ಬರೆದುಕೊಡುವಾಗ ನನಗೆ ಗೊತ್ತಿತ್ತು ಎನ್ನುವುದು ಸರಿ. ಸದರಿ ಕರಾರು ಪತ್ರ ಆಧಾರಿಸಿ ಇನ್ನೂ ಖರೀದಿ ಪತ್ರ ಬರೆಯಲಾಗಿಲ್ಲ ಎಂಬ ವಿಷಯ ಗೊತ್ತಿತ್ತು ಎಂದರೆ ಸರಿ.

4. ದೇವಪ್ಪ, ನಾಗಪ್ಪನಿಗೆ ಕರಾರು ಬರೆದುಕೊಟ್ಟ ಸರ್ವೆ ನಂ 60 ಕ್ಷೇತ್ರ 2 ಎಕರೆ 36 ಗುಂಟೆ. ಆಗ ದೇವಪ್ಪನೇ ಆ 2 ಎಕರೆ 36 ಗುಂಟೆಗೆ ಮಾಲೀಕನಿದ್ದ ಎನ್ನುವುದು ಸರಿ. ದೇವಪ್ಪ ನಾಗಪ್ಪನಿಗೆ ಬರೆದುಕೊಟ್ಟ ಖರೀದಿ ವಚನ ಪತ್ರಕ್ಕೆ ಶಿವಕುಮಾರ ಮತ್ತು ಮಂಜುನಾಥ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಯಿಸಿರುವುದಿಲ್ಲ ಮತ್ತು ಶಿವಕುಮಾರ ಮತ್ತು ಮಂಜುನಾಥ ಯಾರು ಅಂತಾ ನನಗೆ ಗೊತ್ತಿಲ್ಲ.

5. ದೇವಪ್ಪ ನಾಗಪ್ಪನಿಗೆ ಬರೆದಕೊಟ್ಟ ಖರೀದಿ ಕರಾರು ಪತ್ರ ಕಾಯ್ದೆ ಬದ್ಧ ಅಲ್ಲಾ ಎಂದು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ದೇವಪ್ಪ ಯಾವಾಗ ಮರಣ ಹೊಂದಿದರು ಗೊತ್ತಿಲ್ಲ. ಆತನ ಮರಣದ ದಿನಾಂಕ ನಾನು ಹೇಳಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾಗಪ್ಪ ತಡ ಮಾಡಿ ದಾವೆ ಸಲ್ಲಿಸಿದ್ದಾನೆ ಎಂದು ನಾನು ಸಾಕ್ಷಿಯಲ್ಲಿ ಹೇಳಿ ಬರೆಯಿಸಿದ್ದೇನೆ ಎಂದರೆ ಸರಿ. 3 ವರ್ಷದಲ್ಲಿ ಖರೀದಿ ಪತ್ರ ಬರೆಯಿಸಿಕೊಳ್ಳಬೇಕೆಂಬ ಕರಾರು ಇತ್ತು ಆತ ಬರೆಯಿಸಿಕೊಂಡಿಲ್ಲ ಎನ್ನುತ್ತಾರೆ. ದಾವಾ ಸಲ್ಲಿಸುವ ಕಾಲಮಿತಿಯ ಕಾಯ್ದೆಯ ಕುರಿತು ನನಗೆ ಮಾಹಿತಿ ಇಲ್ಲ.

6. ನಾಗಪ್ಪನಿಗೆ 2 ರಿಂದ 3 ಸಾರಿ ಬೇಗ ಖರೀದಿ ಪತ್ರ ಮಾಡಿಕೋ ಬ್ಯಾಂಕಿನ ಸಾಲ ಇದೆ ಆತ ಕಟ್ಟಬೇಕಿದೆ ಬೇಗ ಮಾಡಿಕೋ ಅಂತಾ ಹೇಳಿದೆ ಅದರೆ ನಾಗಪ್ಪ ಸನಿಹ ಬರಲಿಲ್ಲ ಎನ್ನುತ್ತಾರೆ. ಖರೀದಿ ಪತ್ರ ಬರೆಯಿಸಿಕೊಳ್ಳಲು ನಾಗಪ್ಪ ಹಣ ಹಿಡಿದುಕೊಂಡು ಹಲವಾರು ಬಾರಿ ದೇವಪ್ಪನ ಮನೆಗೆ ಹೋದ ಎಂದರೆ ಸರಿಯಲ್ಲ. ದೇವಪ್ಪ ಮತ್ತು ಆತನ ಹೆಂಡತಿ ಮಕ್ಕಳು ಖರೀದಿ ಪತ್ರ ಮಾಡಿಕೊಡಲಿಲ್ಲ ಎಂದರೆ ಸರಿಯಲ್ಲ.

7. ವಚನ ಪತ್ರ ಬರೆದುಕೊಡುವ ಕಾಲಕ್ಕೆ ದೇವಪ್ಪ ಈ ಆಸ್ತಿಯ ಮಾಲೀಕ ಇರಲಿಲ್ಲ ಅಂತಾ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ನಾಗಪ್ಪನಿಗೆ ಕ್ರಿಮಿನಲ್ ಇಂಟೆಷನ್ ಇತ್ತು ಅಂತಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ನಮ್ಮ ವಕೀಲರಿಗೆ ಹೇಳಿಲ್ಲ. ಹಣ ಕೊಟ್ಟ ಮತ್ತು ಪಡೆದ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಆರ್ ಟಿ ಜಿಎಸ್ ಮತ್ತು ಡಿಡಿ ಮೂಲಕ ಹಣ ಸಂದಾಯ ಆಗಿಲ್ಲ ಎಂದು ನಾನು ಸಾಕ್ಷಿ ಪ್ರಮಾಣ ಪತ್ರ ಬರೆಯುವಾಗ ವಕೀಲರಿಗೆ ನಾನು ಮಾಹಿತಿ

ಕೊಟ್ಟಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯ ಫಾರಂ ನಂ. 11-ಇ ಮತ್ತು ಫಾರಂ ನಂ. 10 ಯಾವಾಗ ಆಯಿತು ಗೊತ್ತಿಲ್ಲ. ದೇವಪ್ಪ ಕಿನ್ನಾಳ ಇವರಿಗೆ ಇನ್ನೊಂದು ಜಮೀನು ಸರ್ವೇ ನಂ. 12/2 ಕ್ಷೇತ್ರ 4 ಎಕರೆ 29 ಗುಂಟೆ ಇದೆ ಎನ್ನುವುದು ಸರಿಯಲ್ಲ. ಅದು ದೇವಪ್ಪನ ದೊಡ್ಡವ್ವ ಬಾಳಮ್ಮನ ಜಮೀನು ಇರುತ್ತದೆ. ಶಿವಮ್ಮ ಮತ್ತು ಹಳ್ಳಮ್ಮ ತಮ್ಮ ಹೆಸರಿನಲ್ಲಿರುವ ಜಮೀನು ಸರ್ವೇ ನಂ. 12/2 ಕ್ಷೇತ್ರ 4 ಎಕರೆ 29 ಗುಂಟೆ ಏಕೆ ಮಾರಿಲ್ಲ ಎಂದು ನನಗೆ ಗೊತ್ತಿಲ್ಲ. ದೇವಪ್ಪನ ಕುಟುಂಬದಲ್ಲಿ ಆದ ವ್ಯವಹಾರ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

9. ನಾಗಪ್ಪನಿಗೆ ದೇವಪ್ಪ ಬರೆದುಕೊಟ್ಟ ಖರೀದಿ ವಚನ ಪತ್ರದ ಕುರಿತು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದೆ ಎಂದರೆ ಸರಿಯಲ್ಲ. ಶಿವಪ್ಪ ಚೆರಾರಿ ಇವರಿಗೆ ಪ್ರತಿವಾದಿ ನಂ. 1 ಮತ್ತು 3 ಇವರಿಗೆ ಬರೆದುಕೊಟ್ಟ ಖರೀದಿ ಪತ್ರದ ನಂಬರ್ ಮತ್ತು ದಿನಾಂಕ ಗೊತ್ತಿಲ್ಲ. ದೇವಪ್ಪನಿಗೆ ಸ್ವಲ್ಪ ಓದು ಬರಹ ಬರುತ್ತಿತ್ತು ಎಂದರೆ ಸರಿ. ಆತನ ಸಹಿ ಯಾವ ರೀತಿ ಇತ್ತು ಅಂತಾ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**